ಕರ್ನಾಟಕ ಸರ್ಕಾರ

ಸಂಖ್ಯೆ: ಪಮೂಶಿ/ಆವಿಎ/ವಿನಿ3/ಪ್ರಾ.ವರ್ಗ/03/2020-21

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 012.
ದಿನಾಂಕ: 08/09/2021.

## ಜ್ಞಾಪನ

ವಿಷಯ:- ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾದ ಅರ್ಜಿ ಸಂಖ್ಯೆ: 5688/2020ರ ಮೇಲೆ ಮಾನ್ಯ ನ್ಯಾಯ ಮಂಡಳಿಯು ದಿನಾಂಕ: 17.06.2021ರ ಆದೇಶವನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:-
1. ಅರ್ಜಿ ಸಂಖ್ಯೆ: 5688/2020ರ ಮೇಲೆ ಮಾನ್ಯ ನ್ಯಾಯ ಮಂಡಳಿಯ ಆದೇಶದ ದಿನಾಂಕ: 17.06.2021.
2. ಶ್ರೀ ದೇವರಪ್ಪ ಕೆ, ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊಳಲ್ಕೆರೆ, ಇವರ ಮನವಿ ಪತ್ರ ದಿನಾಂಕ: 02.07.2021.
3. ಈ ಕಚೇರಿ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ: 06/092021

-*-

ಶ್ರೀ ದೇವರಪ್ಪ ಕೆ, ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ, ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾದ ಅರ್ಜಿ ಸಂಖ್ಯೆ: 5688/2020ರ ಮೇಲೆ ಮಾನ್ಯ ನ್ಯಾಯ ಮಂಡಳಿಯು ದಿನಾಂಕ: 17.06.2021ರಂದು ತೀರ್ಮ ನೀಡಿದ್ದು, ಸದರಿ ತೀರ್ಪಿನಲ್ಲಿ ವಿಕಲ ಚೇತನದಡಿ ಮುಂದಿನ ವರ್ಗಾವಣಾ ಕೌನ್ಸಿಲಿಂಗ್‌ನಲ್ಲಿ ಅಥವಾ 03 ತಿಂಗಳ ಒಳಗಾಗಿ ವರ್ಗಾವಣೆಗೆ ಪರಿಗಣಿಸುವಂತೆ ನಿರ್ದೇಶಿಸಿರುತ್ತದೆ.

ಉಲ್ಲೇಖ-3ರಂತೆ, ಸದರಿ ಪ್ರಾಚಾರ್ಯರಿಗೆ ಮಾನ್ಯ ಕರ್ನಾಟಕ ಆಡಳಿತ ಮಂಡಳಿಯ ತೀರ್ಪನ್ನು ಅನುಷ್ಠಾನಗೊಳಿಸುವ ಸಂಬಂಧ ವರ್ಗಾವಣಾ ಸ್ಥಳನಿಯುಕ್ತಿ ಕೌನ್ಸಿಲಿಂಗ್‌ನ್ನು ದಿನಾಂಕ: 08/09/2021 ರಂದು ಬೆಳಗ್ಗೆ 11.30 ಗಂಟೆಗೆ ***ZOOM ತಂತ್ರಾಂಶದ ಮೂಲಕ*** ನಡೆಸಲು ತೀರ್ಮಾನಿಸಲಾಗಿತ್ತು. ಅದರಂತೆ ನಿಗದಿತ ಸಮಯದಲ್ಲಿ ಸ್ಥಳನಿಯುಕ್ತಿ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸಲಾಯಿತು. ಆದರೆ, ಸದರಿ ಪ್ರಾಚಾರ್ಯರು ಸ್ಥಳ ಆಯ್ಕೆ ಮಾಡಿಕೊಂಡ ನಂತರ ದೂರವಾಣಿ ಕರೆ ಮೂಲಕ ಸ್ಥಳ ಆಯ್ಕೆಗೆ ನನ್ನ ಸಮ್ಮತವಿಲ್ಲ ಎಂದು ತಿಳಿಸಿ ಗೊಂದಲಕ್ಕೀಡು ಮಾಡಿರುತ್ತಾರೆ.

ಆದ್ದರಿಂದ, ಮತ್ತೊಮ್ಮೆ ***ದಿನಾಂಕ: 09.09.2021 ರಂದು ಬೆಳಗ್ಗೆ 11-30 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ZOOM ತಂತ್ರಾಂಶದ ಮೂಲಕ*** ಸ್ಥಳನಿಯುಕ್ತಿ ಕೌನ್ಸೆಲಿಂಗ್ ನಡೆಸಲಾಗುವುದು. ಸದರಿ ಪ್ರಾಚಾರ್ಯರು ವರ್ಗಾವಣಾ ಕೌನ್ಸಿಲಿಂಗ್‌ನಲ್ಲಿ ಹಾಜರಾಗಿ ಕಡ್ಡಾಯವಾಗಿ ಸ್ಥಳ ಆಯ್ಕೆಯನ್ನು ಮಾಡಿಕೊಳ್ಳತಕ್ಕದ್ದು. ***ತಪ್ಪಿದಲ್ಲಿ ತಾವು ಗೈರುಹಾಜರಾಗಿರುವಿರಿ ಎಂದು ಪರಿಗಣಿಸಿ ಮಾನ್ಯ ನ್ಯಾಯ ಮಂಡಳಿಗೆ ವರದಿ ಮಾಡಲಾಗುವುದು.***

Cl

............2

**ಕೌನ್ಸೆಲಿಂಗ್‌ಗೆ ಸಂಬಂಧಿಸಿದ ಸೂಚನೆಗಳು:**

1. ಇಲಾಖೆಯಿಂದ ನೀಡಿರುವ ಗುರುತಿನ ಚೀಟಿ/ಪತ್ರ.
2. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು – 2007 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2017 ದಿನಾಂಕ: 29.11.2017ರ ನಿಯಮಗಳನ್ವಯ ಹಾಗೂ ಈ ಕಚೇರಿ ಇದೇ ಸಮಾಂಕಿತ ಜ್ಞಾಪನ ದಿನಾಂಕ: 04.11.2020ರಲ್ಲಿ ಹೊರಡಿಸಲಾದ ಮಾರ್ಗಸೂಚಿಗಳನ್ವಯ ವರ್ಗಾವಣಾ ಕೌನ್ಸೆಲಿಂಗ್ ನಡೆಸಲಾಗುವುದು.
3. ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಯಾವುದೇ ಸ್ಥಳ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.
4. ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕೃತ ಅಂಗವಿಕಲ ಪ್ರಮಾಣ ಪತ್ರ.

*#ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ#*

(ಸಹಿ) 20/08/21
ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ,

*ಶ್ರೀ ದೇವರಪ್ಪ ಕೆ, ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ.*

**ಪ್ರತಿ:**

1. ನಿರ್ದೇಶಕರ ಆಪ್ತಶಾಖೆ, ಜಂಟಿ ನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಆಡಳಿತ) ಇವರಿಗೆ.
2. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ – *ಶ್ರೀ ದೇವರಪ್ಪ ಕೆ, ಪ್ರಾಚಾರ್ಯರು, ಇವರಿಗೆ ಸದರಿ ಜ್ಞಾಪನ ಪತ್ರವನ್ನು ತಲುಪಿಸಿ, ಸ್ವೀಕೃತಿ ಪಡೆಯುವುದು. ಕೌನ್ಸೆಲಿಂಗ್ ಪ್ರಕ್ರಿಯೆ ಮುಗಿದ ನಂತರ ಒಪ್ಪಿಗೆ ಪ್ರಮಾಣ ಪತ್ರವನ್ನು ಪಡೆದು ನಿರ್ದೇಶನಾಲಯಕ್ಕೆ ಸಲ್ಲಿಸುವುದು.*
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇಲಾಖೆಯ **ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಕೌನ್ಸೆಲಿಂಗ್ ಕಾರ್ಯಕ್ಕೆ ಬೇಕಾದ ಕಾರ್ಯ ಸಿದ್ಧತೆ ಮತ್ತು ತಂತ್ರಾಂಶ ವ್ಯವಸ್ಥೆಯನ್ನು ಅಗತ್ಯವಾಗಿ ಸಿದ್ಧಪಡಿಸಿಟ್ಟುಕೊಳ್ಳತಕ್ಕದ್ದು.**
4. ಕಚೇರಿ ಪ್ರತಿ.